**ದಿನಾಂಕ:15/12/2010ರಂದು ಲೆಕ್ಕಪತ್ರ ಸ್ಥಾಯಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಕಾರ್ಯಪಾಲಕ ಅಭಿಯಂತರರು(ಪುಲಿಕೇಶಿನಗರ) ವಿಭಾಗದ ಕಚೇರಿಗೆ ಭೇಟಿ ನೀಡಿ ತಪಾಸಣೆ ನಡೆಸಿದ್ದು, ಆ ಸಂದರ್ಭದಲ್ಲಿ ಕಂಡುಬಂದ ತಪಾಸಣೆ ವರದಿ:–**

**ಹಾಜರಿದ್ದ ಸದಸ್ಯರುಗಳು:–**

| | |
|---|---|
| ಶ್ರೀ.ಗಂಗಭೈರಯ್ಯ | ಅಧ್ಯಕ್ಷರು |
| ಶ್ರೀ.ಎ.ಎಲ್.ಶಿವಕುಮಾರ್, | ಸದಸ್ಯರು |
| ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು |
| ಶ್ರೀ.ಓ.ಮಂಜುನಾಥ್, | ಸದಸ್ಯರು |
| ಶ್ರೀಮತಿ. ಕ್ವೀನ್ ಎಲಿಜಬತ್ | ಸದಸ್ಯರು |
| ಶ್ರೀ.ಸಂಪತ್ ರಾಜ್.ಆರ್. | ಸದಸ್ಯರು |
| ಶ್ರೀ.ನೂರ್ ಜಾನ್ ಷರೀಫ್, | ಸದಸ್ಯರು |

ದಿನಾಂಕ:15/12/2010ರಂದು ಲೆಕ್ಕಪತ್ರ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ.ಗಂಗಭೈರಯ್ಯ ರವರು ಮತ್ತು ಸಮಿತಿಯ ಸದಸ್ಯರೊಂದಿಗೆ ಬೆಳಿಗ್ಗೆ 11–00 ಘಂಟೆಯಲ್ಲಿ ಪುಲಿಕೇಶಿನಗರದ ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿಗೆ ಅನಿರೀಕ್ಷಿತ ಭೇಟಿ ನೀಡಿ ಲೆಕ್ಕಪತ್ರಗಳು ಹಾಗು ಕಚೇರಿ ದಾಖಲೆಗಳನ್ನು ಪರಿಶೀಲಿಸಲಾಯಿತು.

ಲೆಕ್ಕಪತ್ರಗಳ ಪರಿಶೀಲನೆ ವೇಳೆಯಲ್ಲಿ ಮಾನ್ಯ ಅಧ್ಯಕ್ಷರು ಹಾಗು ಸದಸ್ಯರು ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಹಾಗು 2009–10ನೇ ಸಾಲಿನಲ್ಲಿ ನಡೆದ ಟೆಂಡರ್ ವ್ಯವಹಾರಗಳ ಬಗ್ಗೆ ಅನೇಕ ಗುರುತರವಾದ ಲೋಪದೋಷಗಳನ್ನು ಪತ್ತೆ ಹಚ್ಚಿದ್ದು ಸದರಿ ವಿವರಗಳು ಕೆಳಕಂಡಂತಿರುತ್ತವೆ.

1. 2009–10ನೇ ಸಾಲಿನ ಆರ್ಥಿಕ ವರ್ಷದಲ್ಲಿ ವಾರ್ಡ್ ನಂ.36, 37, 50 ಮತ್ತು 51ರಲ್ಲಿ ಶೇಕಡ 22.75ರ ಅನುದಾನದಲ್ಲಿ 58.59ಕೋಟಿಗಳ ವೆಚ್ಚದಲ್ಲಿ ಪರಿಶಿಷ್ಟ ಜಾತಿ/ವರ್ಗಗಳಿಗೆ ಸುಮಾರು 1748 ಮನೆಗಳನ್ನು ನಿರ್ಮಾಣ, 22 ಕಾಂಕ್ರೀಟ್ ರಸ್ತೆಗಳ ನಿರ್ಮಾಣ, 18 ಶೌಚಾಲಯಗಳ ನಿರ್ಮಾಣ ಮತ್ತು ಅಭಿವೃದ್ಧಿ ಹಾಗು ಇತರೆ 2 ಕಾಮಗಾರಿ ಅಭಿವೃದ್ಧಿ ಒಟ್ಟು 622 ಅಂದಾಜುಗಳ ಕಾಮಗಾರಿಗಳಿಗೆ ದಿನಾಂಕ: 30/10/2009ರಂದು ಟೆಂಡರ್ ಕರೆಯಲಾಗಿರುತ್ತದೆ. ಪ್ರತಿ ವಾರ್ಡ್‌ಗಳಲ್ಲಿ ಕಟ್ಟಬೇಕಾದ ಒಟ್ಟು ಮನೆಗಳಿಗೆ ಒಂದೇ ಅಂದಾಜು ತಯಾರಿಸುವ ಬದಲು ಪ್ರತಿ ಮನೆಗೆ ರೂ:9.50ಲಕ್ಷಗಳ ವೆಚ್ಚದಲ್ಲಿ ಕಾರ್ಯಪಾಲಕ ಇಂಜಿನಿಯರ್ ರವರಾದ ಶ್ರೀ.ಸೋಮೇಶ್‌ರವರು ಅಂದಾಜುಗಳನ್ನು ತಮ್ಮ ಮಂಜೂರಾತಿ ಅಧಿಕಾರ ವ್ಯಾಪ್ತಿಗೆ ಬರುವಂತೆ ಕಾಮಗಾರಿಯನ್ನು ವಿಭಜಿಸಿ ಮಂಜೂರು ಮಾಡಿರುವುದನ್ನು ಗಮನಿಸಲಾಗಿರುತ್ತದೆ.

2. ಅದೇ ರೀತಿ ಕಾಂಕ್ರೀಟ್ ರಸ್ತೆ ನಿರ್ಮಾಣ ಶೌಚಾಲಯಗಳ ನಿರ್ಮಾಣ ಮತ್ತು ಅಭಿವೃದ್ಧಿಯಲ್ಲಿ ಕಾಮಗಾರಿಗಳನ್ನು ವಿಭಜಿಸಿ ತಮ್ಮ ಹಂತದಲ್ಲಿಯೇ ಮಂಜೂರು ಮಾಡಿಕೊಂಡಿರುವುದನ್ನು ಪತ್ತೆಹಚ್ಚಲಾಗಿರುತ್ತದೆ.

3. ಈ ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ದಿನಾಂಕ:1/11/2009ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಪಕಟಿಸಿರುವುದಾಗಿ ಪ್ರಕಟಣೆಯ ಜೆರಾಕ್ಸ್ ತುಂಡನ್ನು ಕಡತದಲ್ಲಿ ಇರಿಸಿರುವುದನ್ನು ಗಮನಿಸಲಾಗಿದ್ದಾಗ್ಯೂ ಪತ್ರಿಕೆಯ ಮೂಲ ಪ್ರತಿಯನ್ನು ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ, ಆದ್ದರಿಂದ ಪ್ರಕಟಣೆ ಯಾವ ಆವೃತ್ತಿಯ ಪತ್ರಿಕೆಯ ಪ್ರಕಟಣೆಯಲ್ಲಿ ಪ್ರಕಟಿಸಲಾಗಿದೆ ಎಂಬುದನ್ನು ಪರಿಶೀಲಿಸಲಾಗಲಿಲ್ಲ, ಈ ಬಗ್ಗೆ ಸಾರ್ವಜನಿಕರ ಸಂಪರ್ಕಾಧಿಕಾರಿಯನ್ನು ಸಂಪರ್ಕಿಸಿದರೂ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ.

4. ಹಲವು ಟೆಂಡರ್ ಕಡತಗಳನ್ನು ಪರಿಶೀಲಿಸಲಾಗಿ ಹಲವು ಕಡತಗಳಲ್ಲಿ ಈ ಕೆಳಕಂಡ ನ್ಯೂನತೆಗಳನ್ನು ಪತ್ತೆ ಹಚ್ಚಲಾಗಿರುತ್ತದೆ.

ಎ)ಅಂದಾಜು ಪಟ್ಟಿಯಲ್ಲಿ ಅಂದಾಜು ತಯಾರಿಸುವ ಸಹಾಯಕ ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ರವರ ಸಹಿಗಳೇ ಇರುವುದಿಲ್ಲ. ಅದರೆ ಕಾರ್ಯಪಾಲಕ ಅಭಿಯಂತರರವರು ಮಾತ್ರ ಸಹಿ ಮಾಡಿರುತ್ತಾರೆ, ತಳ ಹಂತದ ಅಧಿಕಾರಿಗಳ ಸಹಿ ಅಥವ ಮಂಡನೆ ಇಲ್ಲದೆ ನೇರವಾಗಿ ಈ ಅಂದಾಜುಗಳನ್ನು ಕಾರ್ಯಪಾಲಕ ಅಭಿಯಂತರರೇ ತಯಾರಿಸಿ ಅನುಮೋದನೆ ಮಾಡಿಕೊಂಡಿರುವುದು ಹಲವು ಸಂಶಗಳಿಗೆ ಕಾರಣವಾಗಿದೆ.

ಬಿ)ಅಂದಾಜು ತಯಾರಿಕೆಯಲ್ಲಿ ತಾಂತ್ರಿಕ ಲೋಪದೋಷಗಳಿರುತ್ತವೆ, ಉದಾಹರಣೆ:– ತಳಪಯಕ್ಕಾಗಿ ಮಣ್ಣು ಅಗೆತದ ಉದ್ದಕ್ಕಿಂತ ತಳಪಾಯದ ಕಲ್ಲುಕಟ್ಟಡದ ಉದ್ದವೇ ಜಾಸ್ತಿ ಇರುವುದು ಹಾಗು ಕಲ್ಲು ಕಟ್ಟಡದ ಉದ್ದಕ್ಕಿಂತ ಕಾಂಕ್ರೀಟ್ ಬ್ಲಾಕ್‌ನಿಂದ ನಿರ್ಮಿಸಿರುವ ಗೋಡೆಯ ಉದ್ದವೇ ಜಾಸ್ತಿ ಇರುವುದು ಕಾಮಗಾರಿ ನಕ್ಷೆಯಲ್ಲಿ ಕಾಮಗಾರಿ ಹೆಸರುಗಳನ್ನು ನಮೂದಿಸದೇ ಇರುವುದು ಆರ್.ಎಂ.ಸಿ.ಕಾಂಕ್ರೀಟ್‌ನಲ್ಲಿ ಸಿ.ಸಿ.ಪ್ರಮೋರೇಷನ್ ನಮೂದಿಸದಿರುವುದು, ಕಾಣೆಯಾದ ಕಲ್ಲು ಚಪ್ಪಡಿಗಳಿಗೆ 50% ಪರಿಮಾಣವನ್ನು ಅಂದಾಜು ಮಾಡಿರುವುದು ಇನ್ನು ಮುಂತಾದ ತಾಂತ್ರಿಕ ದೋಷಗಳಿರುವುದು ಕಂಡುಬಂದಿರುತ್ತದೆ.

ಸಿ)ಕಾಮಗಾರಿ ಅಂದಾಜುಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದಾಗ ಪ್ರತಿ ಅಂದಾಜಿನಲ್ಲಿ 3 ಮನೆಗಳ ನಿರ್ಮಾಣಕ್ಕೆ ಅವಕಾಶ ಮಾಡಿದ್ದು ವಾಸ್ತವವಾಗಿ ಯಾವ ಜಾಗದಲ್ಲಿಯೂ 3 ಮನೆಗಳ ಗುಂಪು ಇರುವುದಿಲ್ಲ ಕೆಲವು ಕಡೆ 1ಮನೆ, 2ಮನೆ, 4ಮನೆ ಈ ರೀತಿ ಇದ್ದು ವಾಸ್ತವ ಸ್ಥಳದ ಅವಶ್ಯಕತೆಯನ್ನಾಧರಿಸಿ ಅಂದಾಜುಗಳನ್ನು ತಯಾರಿಸಿರುವುದಿಲ್ಲ. ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ 22 ಅಂದಾಜುಗಳನ್ನು ತಯಾರಿಸಿದ್ದು ಈಗಾಗಲೇ ಕಾಂಕ್ರೀಟ್ ರಸ್ತೆ ನಿರ್ಮಾಣವಾಗಿರುವ ರಸ್ತೆಗಳಲ್ಲಿ ಅಂದಾಜು ತಯಾರಿಸಿ ಟೆಂಡರ್ ತೆರೆಯಲಾಗಿದೆ ಹಾಗು ಇಂತಹ 8 ಕಾಮಗಾರಿಗಳನ್ನು ಗುರುತಿಸಲಾಗಿದ್ದು ಸಕ್ಷಮ ಅಧಿಕಾರಿಯ ಅನುಮತಿ ಪಡೆಯದೇ 8 ವಿವಿಧ ಬದಲೀ ಸ್ಥಳಗಳಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ, ವಿವರಗಳನ್ನು ವರದಿಯೊಂದಿಗೆ ಲಗತ್ತಿಸಿದೆ.

5. 622ಕಾಮಗಾರಿಗಳಲ್ಲಿ ಮೆ:ಸಪ್ತಗಿರಿ ಬ್ಯುಲ್‌ಟೆಕ್‌ರವರು 60 ಕಾಮಗಾರಿಗಳಿಗೆ ಮೆ:ಅಮೂಲ್ಯ ಕನ್‌ಸ್ಟ್ರಕ್ಷನ್‌ರವರು 59 ಕಾಮಗಾರಿಗಳಿಗೆ ಮತ್ತು ಶ್ರೀ.ಸತ್ಯರೆಡ್ಡಿರವರು 59 ಕಾಮಗಾರಿಗಳಿಗೆ

ಟೆಂಡರ್ ಸಲ್ಲಿಸಿದ್ದು ಇವರು ಸಲ್ಲಿಸಿರುವ ಎಲ್ಲಾ ಕಾಮಗಾರಿಗಳಿಗೂ ಇಬ್ಬರೇ ಗುತ್ತಿಗೆದಾರರೇ ಸ್ಪರ್ಧಿಸಿದ್ದು, ಮೆ:ಸಪ್ತಗಿರಿ ಬ್ಯುಲ್ಡೆರ್‌ರವರು ಸ್ಪರ್ಧಿಸಿರುವ ಎಲ್ಲಾ ಕಾಮಗಾರಿಗಳಲ್ಲಿ ಶ್ರೀ.ಎ.ಚನ್ನಾರೆಡ್ಡಿರವರು ಮಾತ್ರ ಟೆಂಡರ್ ಹಾಕಿದ್ದಾರೆ. ಮೆ:ಅಮೂಲ್ಯ ಕನ್‌ಸ್ಟ್ರಕ್ಷನ್‌ರವರು ಸ್ಪರ್ಧಿಸಿರುವ ಎಲ್ಲಾ ಕಾಮಗಾರಿಗಳಿಗೆ ಶ್ರೀ.ಎಂ.ಬಿ.ಹೊಂಬಾಳ್ ಎನ್ನುವರು ಹಾಗು ಶ್ರೀ.ಸತ್ಯರೆಡ್ಡಿರವರು ಸ್ಪರ್ಧಿಸಿರುವ ಎಲ್ಲಾ ಕಾಮಗಾರಿಗಳಿಗೆ ಅದೇ ಶ್ರೀ.ಎಂ.ಬಿ.ಹೊಂಬಾಳ್‌ರವರೇ 2ನೇ ಸ್ಪರ್ಧಿಯಾಗಿರುತ್ತಾರೆ. ಅತಿ ಆಶ್ಚರ್ಯಕರ ಸಂಗತಿಯೆಂದರೆ ಮೇಲೆ ತಿಳಿಸಿದ ಗುತ್ತಿಗೆದಾರರು ಸಲ್ಲಿಸಿದ್ದ ಎಲ್ಲಾ ಟೆಂಡರುಗಳು ಊರ್ಜಿತವಾಗಿರುವುದು ಪ್ರತಿಯೊಂದು ಟೆಂಡರ್‌ನಲ್ಲೂ ಒಂದೇ ತೆರನಾದ ದರಗಳನ್ನು ನಮೂದಿಸಿರುವುದು ಮತ್ತು ಕೆಲವು ಸಂದರ್ಭದಲ್ಲಿ ಇಬ್ಬರು ಗುತ್ತಿಗೆದಾರರು ಪಡೆದ ಇ.ಎಂ.ಡಿ.ಗಳ ಡಿ.ಡಿ.ಸಂಖ್ಯೆಗಳು ನಿರಂತರ ಅನು ಕ್ರಮಸಂಖ್ಯೆಗಳನ್ನು ಹೊಂದಿರುವುದು ಹಾಗು ಒಂದೇ ಬ್ಯಾಂಕಿನಿಂದ ತೆಗೆಯಲ್ಪಟ್ಟವುಗಳಾಗಿರುತ್ತವೆ. ಈ ಅಂಶವು ಟೆಂಡರ್ ಪ್ರಕ್ರಿಯೆಯಲ್ಲಿ ಅವ್ಯವಹಾರ ನೀಡಿರುವುದನ್ನು ಪುಷ್ಠೀಕರಿಸುತ್ತದೆ.

6. ಹಲವಾರು ಕಡತಗಳ ಟಿಪ್ಪಣೆಯಲ್ಲಿ ಕಾರ್ಯಪಾಲಕ ಇಂಜಿನಿಯರ್ ರವರ ಸಹಿ ಮಾತ್ರ ಇದ್ದು ಕೆಳವರ್ಗದ ಯಾವುದೇ ಅಧಿಕಾರಿಗಳ ಸಹಿ ಇಲ್ಲದಿರುವುದು ಹಾಗು ಎಲ್ಲಾ ಕಡತಗಳ ಕಚೇರಿ ಟಿಪ್ಪಣಿಗಳು ಏಕರೂಪವಾಗಿರುವುದು (ಪೋಟೋ ಟೈಪ್)ಕಾರ್ಯಪಾಲಕ ಇಂಜಿನಿಯರ್‌ರವರ ಏಕಸ್ವಾಮ್ಯ ಕಾರ್ಯಚರಣೆಯನ್ನು ಪ್ರತಿಪಾದಿಸುತ್ತದೆ.

7. ಗುತ್ತಿಗೆದಾರರು ಸಲ್ಲಿಸಿರುವ ಟೆಂಡರ್ ದರಗಳು ಹೆಚ್ಚಾಗಿವೆಯೆಂದು ತಿಳಿಸಿ ಸಂದಾನಕ್ಕೆ ಬರುವಂತೆ ಕೋರಿರುವ ಪತ್ರ ಹಾಗು ಗುತ್ತಿಗೆದಾರರು ಸಂಧಾನ ದರ ನಮೂದಿಸಿದಂತೆ ಸೂಚಿಸಲ್ಪಡುವ ಪತ್ರಗಳು ಪೂರ್ಣವಾಗಿ ಖಾಲಿ ಇದ್ದು ಸಂಧಾನಿತ ದರವನ್ನು ಹೇಗೆ ಪಡೆಯಲಾಯಿತು ಎಂಬುದು ಆಶ್ಚರ್ಯವನ್ನುಂಟು ಮಾಡುತ್ತದೆ.

8. ಮುಖ್ಯ ಇಂಜಿನಿಯರ್‌ರವರು ಕಡತದಲ್ಲಿ ಸೂಚಿಸಿರುವಂತೆ ಟೆಂಡರ್ ಪರಿಶೀಲನಾ ಸಮಿತಿಯ ಮುಂದೆ ಇಟ್ಟಿದ್ದು ಸದರಿ ಸಮಿತಿಯ ಸದಸ್ಯರಾದ ಸಹಾಯಕ ನಿಯಂತ್ರಕರು(ಪೂರ್ವ) ಶ್ರೀಮತಿ ವಾಣಿ, ಕಾರ್ಯಪಾಲಕ ಇಂಜಿನಿಯರ್ ಆದ ಶ್ರೀ.ಸೋಮೇಶ್ ಹಾಗು ಮುಖ್ಯ ಇಂಜಿನಿಯರ್ ಆದ ಶ್ರೀ.ಎಸ್.ಸಿ.ಜಯಚಂದ್ರ ರವರು ಕಡತಗಳನ್ನು ಪರಿಶೀಲಿಸದೆ ಅನುಮೋದನೆ ನೀಡಿರುವುದನ್ನು ಗಮನಿಸಿದ್ದು ಹಿಂದಿನ ಕಾರ್ಯಪಾಲಕ ಇಂಜಿನಿಯರ್‌ರವರಾದ ಶ್ರೀ.ಸೋಮೇಶ್‌ರವರೊಂದಿಗೆ ಈ ಅವ್ಯವಹಾರದಲ್ಲಿ ಭಾಗಿಯಾಗಿರುವುದನ್ನು ಪುಷ್ಠೀಕರಿಸುತ್ತದೆ.

9. ಗುತ್ತಿಗೆದಾರರೊಂದಿಗೆ ಮಾಡಿಕೊಂಡಿರುವ ಅನೇಕ ಒಪ್ಪಂದ ಪತ್ರಗಳು ಖಾಲಿ ಇದ್ದು, ಅಂದಾಜು ಸಿದ್ದಪಡಿಸುವಿಕೆಯಿಂದ ಗುತ್ತಿಗೆದಾರರಿಗೆ ಕೆಲಸವಹಿಸಿಕೊಡುವವರಿಗೆ ಎಲ್ಲಾ ಹಂತದಲ್ಲಿ ಅಕ್ರಮಗಳು ಆಗಿರುವುದು ಕಂಡುಬರುತ್ತದೆ.

10. ಸದರಿ ಟೆಂಡರ್‌ಗಳನ್ನು ಇ–ಟೆಂಡರ್ ಮುಖಾಂತರ ಕಿಯೋನಿಕ್ಸ್ ಸಂಸ್ಥೆ ಸಹಯೋಗದೊಂದಿಗೆ ನಿರ್ವಹಿಸಿದ್ದು ದಿನಾಂಕ:5–12–2009ರಂದು ಟೆಂಡರ್‌ಗಳನ್ನು ತೆರೆಯಲಾಗಿದ್ದು ದಿನಾಂಕ:6–1–2010ರಂದು ಕಾಮಗಾರಿ ಕಾರ್ಯಾದೇಶಗಳನ್ನು ನೀಡಲಾಗಿದೆ. ಆದರೆ 485 ಡಿ.ಡಿ.ಗಳನ್ನು ದಿನಾಂಕ:17/2/2010ರಿಂದ 26/3/2010ರ ಅವಧಿಯಲ್ಲಿ ಬಿ.ಬಿ.ಎಂ.ಪಿ.ಗೆ ಜಮಾ ಮಾಡಿದೆ. 23

ಸಂಖ್ಯೆ ಡಿ.ಡಿ.ಗಳನ್ನು ದಿನಾಂಕ:16/12/2010ರಂದು ಜಮೆ ಮಾಡಿದ್ದು, 69 ಡಿ.ಡಿಗಳು ವಾಯಿದೆ ಮುಗಿದಿದ್ದು ಈವರೆವಿಗೂ ನವೀಕರಣವಾಗದೆ ಪಾಲಿಕೆಗೆ ಬರಬೇಕಾದ ರೂ:13,13,000–00ಗಳು ಜಮಾ ಆಗದೆ ಬಾಕಿ ಉಳಿದಿರುತ್ತದೆ. ಇ.ಎಂ.ಡಿ. ಜಮೆಯಲ್ಲಿ ಸುಮಾರು ಮೂರು ತಿಂಗಳಿಂದ ಒಂದು ವರ್ಷಕ್ಕೂ ಮೀರಿ ವಿಳಂಬವಾಗಿದ್ದು ಪಾಲಿಕೆಗೆ ಆರ್ಥಿಕ ನಷ್ಟವನ್ನುಂಟು ಮಾಡಿರುತ್ತಾರೆ. ಇವುಗಳಲ್ಲಿ ಅನೇಕ ಕಾಮಗಾರಿಗಳಿಗೆ ಬಿಲ್ಲನ್ನು ಸಹ ಈಗಾಗಲೇ ಪಾವತಿಸಲಾಗಿರುತ್ತದೆ.

11. ಟೆಂಡರ್ ತೆರೆಯುವ ರಿಜಿಸ್ಟರ್ ಅನ್ನು ನಿರ್ವಹಿಸದೇ ಇರುವುದು, **ಟೆಂಡರ್ ಪ್ರಕ್ರಿಯೆಯಲ್ಲಿ ಲೆಕ್ಕಪತ್ರ ಶಾಖೆಯ ಅಧೀಕ್ಷಕರನ್ನು ಭಾಗಿದಾರರನ್ನಾಗಿ ಮಾಡಿಕೊಳ್ಳದಿರುವುದು, ಇ.ಎಂ.ಡಿ. ಹಣ ಡಿ.ಡಿಗಳನ್ನು ಜಮೆ ಮಾಡಲು ಲೆಕ್ಕಪತ್ರ ಶಾಖೆಗೆ ನೀಡದೆ ಕಾರ್ಯಪಾಲಕ ಅಭಿಯಂತರರೇ ತಮ್ಮ ಸುಪರ್ಧಿನಲ್ಲೇ ಇಟ್ಟುಕೊಂಡಿದ್ದುದು ತನಿಖೆಯ ವೇಳೆ ಕಂಡುಬಂದಿರುತ್ತದೆ.**

12. ತನಿಖೆಯ ವೇಳೆ ಮೆ:ಸಪ್ತಗಿರಿ ಬಿಲ್ಟೆಕ್‌ರವರಿಗೆ ಸಂಬಂಧಿಸಿದ 6 ಸಂಖ್ಯೆ ಕಡತಗಳು ನಾಪತ್ತೆಯಾಗಿರುವುದು ಕಂಡುಬಂದಿದ್ದು ಇದು ಅನೇಕ ಸಂಶಯಗಳಿಗೆ ಎಡೆ ಮಾಡಿಕೊಡುತ್ತದೆ.

ಮೇಲ್ಕಂಡ ಕಾರಣಗಳಿಂದಾಗಿ ಕಾರ್ಯಪಾಲಕ ಇಂಜಿನಿಯರ್‌ರವರಾದ ಶ್ರೀ.ಸೋಮೇಶ್ ರವರು ಟೆಂಡರ್ ನಿರ್ವಹಣೆಯಲ್ಲಿ ಭಾರಿ ಅಕ್ರಮ ನಡೆಸಿದ್ದು ಈ ಬಗ್ಗೆ ಆಡಳಿತಾತ್ಮಕ ತನಿಖೆ ನಡೆಸಿ ಈ ಅಕ್ರಮದಲ್ಲಿ ಭಾಗಿಯಾಗಿರುವ ಇತರೆ ಅಧಿಕಾರಿಗಳ ವಿರುದ್ದವು ಕೂಡ ಶಿಸ್ತು ಕ್ರಮ ಜರುಗಿಸಲು ಸ್ಥಾಯಿ ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

:ಪೂಜ್ಯ ಮಹಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಲೆಕ್ಕಪತ್ರ ಸ್ಥಾಯಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.
:ಆಯುಕ್ತರು ರವರ ಅವಗಾಹನೆಗೆ ಹಾಗು ಮುಂದಿನ ಕ್ರಮಕ್ಕೆ ಕಳುಹಿಸಿದೆ.

**<u>ಲೆಕ್ಕಪತ್ರ ಸ್ಥಾಯಿ ಸಮಿತಿಯ ಅಧ್ಯಕ್ಷರು ದಿನಾಂಕ:24/12/2010ರಂದು ಮದ್ಯಾಹ್ನ 4–30ಕ್ಕೆ ದಾಸಪ್ಪ ಆಸ್ಪತ್ರೆ ಆವರಣದಲ್ಲಿರುವ ಎಂ.ಸಿ.ಹೆಚ್ ಕಛೇರಿ, ತಂಬಾಕು ನಿಯಂತ್ರಣ ಯೋಜನೆ ಕಚೇರಿ ಹಾಗು ಮ್ಯಾನೇಜಡ್ ಹೆಲ್ತ್ ಕೇರ್ ಕಚೇರಿಯನ್ನು ತಪಾಸಣೆ ನಡೆಸಿದ ಬಗ್ಗೆ ವರದಿ:–</u>**

1. **<u>ಸೊಳ್ಳೆ ನಿಯಂತ್ರಣ ಕಛೇರಿ</u>**

ಸೊಳ್ಳೆ ನಿಯಂತ್ರಣ ವಿಭಾಗ ಕಚೇರಿಯನ್ನು ಭೇಟಿ ನೀಡಿ ಪರಿಶೀಲಿಸಲಾಯಿತು ಸದರಿ ಕಚೇರಿಯಲ್ಲಿ ಆರೋಗ್ಯ ವೈದ್ಯಾಧಿಕಾರಿಗಳಾದ ಡಾ:ಸುರೇಶ್ ರವರು ಕಚೇರಿಯಲ್ಲಿ ಹಾಜರಿರುವುದಿಲ್ಲ, ಈ ಬಗ್ಗೆ ಡಾಟ್ ಎಂಟ್ರಿ ಅಪರೇಟರ್ ಮಾತ್ರ ಕಚೇರಿಯಲ್ಲಿದ್ದು, ಗುಮಾಸ್ತರಾದ ಶ್ರೀಧರ್ ರವರು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿ ಹೊರ ಹೋಗಿರುತ್ತಾರೆ. 4ನೇ ದರ್ಜೆ ನೌಕರರಾದ ಶ್ರೀಮತಿ ನರಸಮ್ಮ ರವರು ಸಹಿ ಮಾಡಿ ಮನೆಗೆ ಹೋಗಿರುವುದಾಗಿ ಕಚೇರಿಯಲ್ಲಿ ತಿಳಿಸಿರುತ್ತಾರೆ. ಈ ವ್ಯವಸ್ಥೆಯನ್ನು ಗಮನಿಸಿದಾಗ ಸಿಬ್ಬಂದ ವರ್ಗದವರು ಕಚೇರಿಯಲ್ಲಿ ಹಾಜರಿಲ್ಲದೆ ಇದ್ದುದೇ ಅಲ್ಲದೇ ಅಧ್ಯಕ್ಷರು ಕೋರಿದ ಕಡತಗಳನ್ನು ಪರಿಶೀಲನೆಗೆ ಒದಗಿಸುವಲ್ಲಿ ವಿಫಲರಾಗಿರುತ್ತಾರೆ, ಸದರಿ ಗುಮಾಸ್ತರನ್ನು ದೂರವಾಣಿ ಮುಖಾಂತರ ಕಚೇರಿಗೆ ಕರೆಸಿ ಲೆಕ್ಕಪತ್ರಗಳನ್ನು ಪರಿಶೀಲಿಸಲಾಯಿತು.

ಕಚೇರಿಯಲ್ಲಿ ನಗದು ಪುಸ್ತಕವನ್ನು ಇದುವರೆವಿಗೂ ನಿರ್ವಹಿಸದೇ ಇರುವುದರಿಂದ ಕೂಡಲೇ ನಿರ್ವಹಣೆ ಮಾಡಲು ಸಿಬ್ಬಂದಿಗಳಿಗೆ ಸೂಚಿಸಲಾಗಿದೆ, ಹಾಗೆಯೇ ದೂರವಾಣಿ ಬಿಲ್ ಪುಸ್ತಕವನ್ನು ಪರಿಶೀಲಿಸಲಾಗಿ ಬಿಲ್ ಪ್ರತಿಯನ್ನೇ ಡಿ.ಸಿ. ಬಲ್ ರಿಜಿಸ್ಟರ್ ಎಂದು ಸಂಬಂದಪಟ್ಟ ಸಿಬ್ಬಂದಿ ತಿಳಿಸಿರುತ್ತಾರೆ ಈ ಬಗ್ಗೆಯೂ ಸಹ ರಿಜಿಸ್ಟರ್ ಅನ್ನು ನಿರ್ವಹಣೆ ಮಾಡಲು ಸೂಚಿಸಲಾಗಿದೆ.

2. **<u>ಮ್ಯಾನೇಜಡ್ ಹೆಲ್ತ್ ಕೇರ್ ಕಚೇರಿ</u>**

ಸದರಿ ಕಚೇರಿಯನ್ನು ಪರಿಶೀಲಿಸಲಾಗಿ ಶಿವಾಜಿನಗರದ ಆರೋಗ್ಯ ವೈದ್ಯಾಧಿಕಾರಿ ಡಾ:ಸಿದ್ದಪ್ಪಾಜಿ ರವರು ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವುದು ಕಂಡುಬಂದಿದ್ದು, ಸದರಿ ಕಚೇರಿಯಲ್ಲಿ ಪಾಲಿಕೆಯ ಸಿಬ್ಬಂದಿ ಮತ್ತು ಕುಟುಂಬ ವರ್ಗದವರಿಗೆ ವೈದ್ಯಕೀಯ ವೆಚ್ಚವನ್ನು ಭರಿಸುವ ಕಚೇರಿಯಾಗಿದ್ದು ಪ್ರತಿ ಮಾಹೆ 10ನೇ ತಾರೀಖಿನ ಒಳಗೆ ಬರುವ ಬಿಲ್ಲುಗಳನ್ನು ಲಿಸ್ಟ್ ಮಾಡಿ ಮೇಲಧಿಕಾರಿಗಳ ಅನುಮತಿ ಪಡೆದು ಸಂಬಂದಪಟ್ಟ ಆಸ್ಪತ್ರೆಗಳಿಗೆ ಪಾವತಿಸುವ ವ್ಯವಸ್ಥೆ ಇದ್ದು ಈ ಮಾಹೆಯಲ್ಲಿ ಸುಮಾರು 94 ಲಕ್ಷಗಳ ಬಿಲ್ ಆಸ್ಪತ್ರೆಗಳಿಂದ ಬಂದಿರುವುದಾಗಿ ತಿಳಿಸಿದರು.

ಈ ಸಂದರ್ಬದಲ್ಲಿ ನಗದು ಪುಸ್ತಕ ನಿರ್ವಹಣೆಯ ಬಗ್ಗೆ ಪರಿಶೀಲಿಸಲಾಗಿ ಸರಿಯಾಗಿ ನಿರ್ವಹನೆ ಮಾಡಿಲ್ಲದಿರುವುದು ಸಹ ಕಂಡುಬಂದಿದೆ. ಹಾಗೆಯೇ ಬಿಲ್ ರಿಜಿಸ್ಟರ್‌ನಲ್ಲಿ

ಸಂಬಂದಪಟ್ಟ ಆಸ್ಪತ್ರೆಗಳಿಗೆ ಹಣ ಪಾವತಿ ದಿನಾಂಕ ಇತ್ಯಾಧಿಗಳ ಮಾಹಿತಿಗಳನ್ನು ನಿರ್ವಹಿಸಲು ಸೂಚಿಸಲಾಯಿತು.

ಸದರಿ ಕಚೇರಿಯಲ್ಲಿ 3 ಮಂದಿ ಕಂಪ್ಯೂಟರ್ ಅಪರೇಟರ್‌ಗಳು ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿದೆ, ಈ ಸಿಬ್ಬಂದಿಗಳು ಸುಮಾರು 6-9 ತಿಂಗಳಿಂದ ಕಾರ್ಯ ನಿರ್ವಹಿಸುತ್ತಿದ್ದರು ಸಹ ಕಚೇರಿಯಲ್ಲಿ ಕಂಪ್ಯೂಟರ್ ಇಲ್ಲದೆ ಇರುವುದು ಕಂಡುಬಂದಿದೆ. ಈ ರೀತಿ ಕಂಪ್ಯೂಟರ್ ಇಲ್ಲದೇ ಇದ್ದರು ಸಹ ಆಪರೇಟರ್‌ಗಳನ್ನು ನೇಮಿಸಿಕೊಂಡಿರುವುದರಿಂದ ಪಾಲಿಕೆಗೆ ನಷ್ಟ ಉಂಟಾಗುವುದರಿಂದ ಈ ಬಗ್ಗೆ ಕ್ರಮ ಜರುಗಿಸುವುದು.

3. **ರಾಷ್ಟ್ರೀಯ ತಂಬಾಕು ನಿಯಂತ್ರಣ ಯೋಜನೆ ಕಚೇರಿ:-**

ಸದರಿ ಕಚೇರಿಗೆ ಭೇಟಿ ನೀಡಿದಾಗ ಕಚೇರಿಯಲ್ಲಿ ಯಾರು ಇಲ್ಲದೇ ಇರುವುದು ಕಂಡುಬಂದಿದ್ದು, ಸ್ವಲ್ಪ ಸಮಯದ ನಂತರ ಕಂಪ್ಯೂಟರ್ ಅಪರೇಟರ್ ಒಬ್ಬರು ಬಂದು ಡಾ:ಸವಿತ ರವರು ರಜೆಯಲ್ಲಿರುವುದಾಗಿ ತಿಳಿಸಿರುತ್ತಾರೆ, ಆದರೆ ಸದರಿ ಕಚೇರಿಯ ಕಾರ್ಯವೈಖರಿ, ಸದರಿ ಕಚೇರಿ ಪಾಲಿಕೆಯಲ್ಲಿ ನಿರ್ವಹಿಸುತ್ತಿರುವ ಕಾರ್ಯನಿರ್ವಹಣೆ ಇತ್ಯಾಧಿಗಳ ಬಗ್ಗೆ ಪಾಲಿಕೆಯ ಯಾವುದೇ ಸದಸ್ಯರಿಗೆ ಇದುವರೆವಿಗೂ ಯಾವುದೇ ಮಾಹಿತಿ ಇಲ್ಲದಿರುವುದರಿಂದ ಈ ಕುರಿತು ಪಾಲಿಕೆಯ ಎಲ್ಲಾ ಸದಸ್ಯರಿಗೆ ಈ ಕಚೇರಿಯ ಕಾರ್ಯನಿರ್ವಹಣೆ ಬಗ್ಗೆ ಅಯುಕ್ತರು ಮಾಹಿತಿ ಒದಗಿಸಲು ಸಮಿತಿಯ ವತಿಯಿಂದ ಕೋರಿದೆ.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

:ಪೂಜ್ಯ ಮಹಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಲೆಕ್ಕಪತ್ರ ಸ್ಥಾಯಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.
:ಆಯುಕ್ತರು ರವರ ಅವಗಾಹನೆಗೆ ಹಾಗು ಮುಂದಿನ ಕ್ರಮಕ್ಕೆ ಕಳುಹಿಸಿದೆ.

**<u>ದಿನಾಂಕ:31/12/2010ರಂದು ಲೆಕ್ಕಪತ್ರ ಸ್ಥಾಯಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಸಹಾಯಕ ಕಂದಾಯ ಅಧಿಕಾರಿ (ಜಯನಗರ) ಕಚೇರಿಗೆ ಭೇಟಿ ನೀಡಿ ತಪಾಸಣೆ ನಡೆಸಿದ್ದು, ಆ ಸಂದರ್ಭದಲ್ಲಿ ಕಂಡುಬಂದ ನ್ಯೂನತೆಗಳ ಬಗ್ಗೆ ತಪಾಸಣೆ ವರದಿ:–</u>**

<u>ಹಾಜರಿದ್ದ ಸದಸ್ಯರುಗಳು:–</u>

| | |
|---|---|
| ಶ್ರೀ.ಗಂಗಭೈರಯ್ಯ | ಅಧ್ಯಕ್ಷರು |
| ಶ್ರೀಮತಿ ಶಕುಂತಲ, | ಸದಸ್ಯರು |
| ಶ್ರೀಮತಿ. ಕ್ವೀನ್ ಎಲಿಜಬತ್ | ಸದಸ್ಯರು |
| ಶ್ರೀ.ಸಂಪತ್ ರಾಜ್.ಆರ್. | ಸದಸ್ಯರು |
| ಶ್ರೀ.ನೂರ್ ಜಾನ್ ಷರೀಫ್, | ಸದಸ್ಯರು |
| ಶ್ರೀಮತಿ ಚೇತನಗೌಡ | ಸದಸ್ಯರು |

ದಿನಾಂಕ:31/12/2010ರಂದು ಲೆಕ್ಕಪತ್ರ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ.ಗಂಗಭೈರಯ್ಯ ರವರು ಮತ್ತು ಸಮಿತಿಯ ಸದಸ್ಯರೊಂದಿಗೆ ಸಂಜೆ 4–30ಕ್ಕೆ ಸಹಾಯಕ ಕಂದಾಯ ಅಧಿಕಾರಿ(ಜಯನಗರ) ಕಚೇರಿಗೆ ಭೇಟಿ ನೀಡಿ ಲೆಕ್ಕಪತ್ರಗಳು ಹಾಗು ಕಚೇರಿ ದಾಖಲೆಗಳನ್ನು ಪರಿಶೀಸಲಾಗಿ, ಕಳೆದ ಮೂರು ವರ್ಷದ ಲೆಕ್ಕ ಪರಿಶೋಧನಾ ಆಕ್ಷೇಪಣೆ ಬಗ್ಗೆ ಪರಿಶೀಲಿಸುತ್ತಾ, 2008–2009ನೇ ಸಾಲಿನಲ್ಲಿ ತಿರಸ್ಕೃತಗೊಂಡಿರುವ ಚೆಕ್ಕುಗಳ ಬಗ್ಗೆ ಪರಿಶೀಲಿಸುತ್ತಾ, ವಾರ್ಡ್–60ರಲ್ಲಿ ತಿರಸ್ಕೃತಗೊಂಡ ಚೆಕ್ಕುಗಳ ವಿವರಗಳನ್ನು ಒದಗಿಸುವಂತೆ ಸಹಾಯಕ ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಯಿತು.

ಈ ಕುರಿತು ಸಹಾಯಕ ಕಂದಾಯ ಅಧಿಕಾರಿ(ಜಯನಗರ) ರವರು ಮಾತನಾಡಿ ಉಪ ಅಯುಕ್ತರು(ಕಂದಾಯ)ರವರು ಆಡಿಟ್ ಆಕ್ಷೇಪಣೆಗಳಿಗೆ ನೋಟೀಸ್ ನೀಡಿದ ಮೇರೆಗೆ ಪರಿಶೀಲಿಸಲಾಗಿ ಸುಮಾರು 22 ತಿರಸ್ಕೃತ ಚೆಕ್ಕುಗಳು ಹಿಂದಿನ ಕಂದಾಯ ವಸೂಲಿಗಾರರಾದ ಶ್ರೀ.ದೊರೆ ರಾಜ್ ರವರ ಬಳಿ ಇದ್ದು, ಸದರಿಯವರು ಮುಂಬಡ್ತಿ ಹೊಂದಿ ಬೊಮ್ಮನಹಳ್ಳಿ ಸ.ಕಂ.ಅ ಕಚೇರಿಗೆ ಹೋಗಿದ್ದು, ಈ ಕುರಿತುಸಹ ತಿರಸ್ಕೃತ ಚೆಕ್ಕುಗಳನ್ನು ನೀಡುವಂತೆ ಸದರಿ ನೌಕರರಿಗೆ ನೋಟೀಸ್ ಜಾರಿ ಮಾಡಿದ್ದರು ಸಹ ಇದುವರೆವಿಗೂ ಕಚೇರಿಗೆ ಹಾಜರಾಗಿ ಲೆಕ್ಕಪತ್ರಗಳನ್ನು ನೀಡಿರುವುದಿಲ್ಲವೆಂದು ಸಮಿತಿಗೆ ತಿಳಿಸಿದರು.

ಅಪರ ಆಯುಕ್ತರು (ದಕ್ಷಿಣ)ರವರು ಮಾತನಾಡಿ ಈ ಕಚೇರಿಯಿಂದ ಬಿಡುಗಡೆ ಹೊಂದಿ ಸುಮಾರು 2 ತಿಂಗಳು ಆಗಿದ್ದರು ಸಹ ಲೆಕ್ಕಪತ್ರಗಳನ್ನು ನೀಡಿಲ್ಲದಿವುರುವುದು ನಿಯಮಬಾಹಿರ

ವಾದ್ದರಿಂದ ಕಂದಾಯ ಅಧಿಕಾರಿ ಮತ್ತು ಸಹಕಂದಾಯ ಅಧಿಕಾರಿಗಳ ಸಮ್ಮುಖದಲ್ಲಿ ನಿಯಮಾನುಸಾರ ಕ್ರಮ ಜರುಗಿಸಲು ಸೂಚಿಸಿದರು.

ಸಹಾಯಕ ಕಂದಾಯ ಅಧಿಕಾರಿಗಳು(ಜಯನಗರ)ರವರು ಸದರಿ ನೌಕರರಾದ ಶ್ರೀ ದೊರೆರಾಜ್‌ರವರ ಸುಬರ್ಧಿನಲ್ಲಿದ್ದ ಅಲ್ಮೇರಾದ ಬೀಗವನ್ನು ತೆರೆಸಿ ಅದರಲ್ಲಿದ್ದ ಕಡತಗಳನ್ನು ಪರಿಶೀಲಿಸಿ ಕಡತಗಳ ಪಟ್ಟಿಯನ್ನು ತಯಾರಿಸಿ ವಿವರಗಳನ್ನು ನೀಡುತ್ತಾ 22 ಚೆಕ್ಕುಗಳ ಬಗ್ಗೆ ಅಲ್ಮೇರಾದಲ್ಲಿ ಯಾವುದೇ ಮಾಹಿತಿ ಇಲ್ಲವೆಂದು ತಿಳಿಸಿದರು.

ಅಪರ ಆಯುಕ್ತರು(ದಕ್ಷಿಣ)ರವರು ಈ ಬಗ್ಗೆ ಮಾನ್ಯ ಆಯುಕ್ತರೊಂದಿಗೂ ಸಹ ದೂರವಾಣಿಯಲ್ಲಿ ಚರ್ಚಿಸಿ ಹಿಂದಿನ ಕಂದಾಯ ವಸೂಲಿಗಾರರಾದ ಶ್ರೀ.ದೊರೆರಾಜ್ ರವರು ಮುಂಬಡ್ತಿ ಹೊಂದಿ ಬೇರೆ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, 2 ತಿಂಗಳಾದರು ಸಹ ಇದುವರೆವಿಗೂ 2008–09ನೇ ಸಾಲಿನ ಆಡಿಟ್ ಆಕ್ಷೇಪಣೆಯಲ್ಲಿದ್ದ ತಿರಸ್ಕೃತ ಚೆಕ್ಕುಗಳ ಬಗ್ಗೆ ಮಾಹಿತಿ ನೀಡದೇ ಇರುವುದರಿಂದ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಭೀತಾಗಿದೆ ಎಂದು ಅಮಾನತಿಗೆ ಶಿಫಾರಸ್ಸು ಮಾಡಿದರು.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿ:– :ಪೂಜ್ಯ ಮಹಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಲೆಕ್ಕಪತ್ರ ಸ್ಥಾಯಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.
:ಆಯುಕ್ತರು ರವರ ಅವಗಾಹನೆಗೆ ಹಾಗು ಮುಂದಿನ ಕ್ರಮಕ್ಕೆ ಕಳುಹಿಸಿದೆ.